ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದ್ದರು.

7. ಫ್ರೀಡಂ ಪಾರ್ಕ್‌ನಲ್ಲಿ ಧರಣಿ ಮಾಡುತ್ತಿದ್ದವರನ್ನು ಅರೆಸ್ಟ್ ಮಾಡಿರುವ ಬಗ್ಗೆ.

ಉಪಾಧ್ಯಕ್ಷರು:– ಬಸವರಾಜ್ ಬೊಮ್ಮಾಯಿ ಅವರೇ ಚರ್ಚೆಯನ್ನು ಪ್ರಾರಂಭ ಮಾಡಿ.

ಶ್ರೀ ಎ.ಎಸ್. ಪಾಟೀಲ್ (ನಡಹಳ್ಳಿ):– ಮಾನ್ಯ ಅಧ್ಯಕ್ಷರೆ, Article 371 ಬಗ್ಗೆ ಹೊರಗಡೆ freedom park ನಲ್ಲಿ ಜನ strike ಮಾಡುತ್ತಿದ್ದಾರೆ. ಯಾವುದೇ ಕಾರಣವಿಲ್ಲದೆ, ಮಾಜಿ ಸಚಿವರಾಗಿದ್ದಂತಹ ಶ್ರೀ ವೈಜನಾಥ ಪಾಟೀಲ್ ಅವರನ್ನು ಮತ್ತು ಸಂಬಂಧಪಟ್ಟಿರುವವರನ್ನು arrest ಮಾಡಿದ್ದಾರೆ. Peaceful ಆಗಿ protest ಮಾಡುವವರಿಗೂ ಇಲ್ಲಿ ಅವಕಾಶವಿಲ್ಲವೇ ಎನ್ನುವ ಪ್ರಶ್ನೆ ಉದ್ಭವವಾಗುತ್ತದೆ.

(ಗೊಂದಲ)

ಶ್ರೀ ಬಿ.ಆರ್. ಪಾಟೀಲ್:– ಮಾನ್ಯ ಅಧ್ಯಕ್ಷರೆ, ಬೆಳಿಗ್ಗೆ ನಾವು ಹೋಗಿ ಬಂದಿದ್ದೇವೆ. ಅಲ್ಲಿ ಬಹಳ ಶಾಂತಿಯುತವಾಗಿ strike ನಡೆಯುತ್ತಿತ್ತು. ನಾವೂ ಕೂಡ ಎರಡು ಮಾತುಗಳನ್ನು ಮಾತನಾಡಿ ಬಂದಿದ್ದೇವೆ. ಯಾವುದೇ ಕಾರಣವಿಲ್ಲದೆ ಹಾಗೂ ಅವರು ಕಾನೂನು ರೀತಿಯಲ್ಲಿ permission ತೆಗೆದುಕೊಂಡು ಧರಣಿ ಮಾಡುತ್ತಿದ್ದಾರೆ. ಆದರೆ ಸರ್ಕಾರ ಅವರನ್ನು arrest ಮಾಡಿದ್ದಾರೆ ಎಂದರೆ ಇದು ಎಂತಹ ಸರ್ಕಾರ? ಇದು democracy ಅಲ್ಲವೇ? ಯಾರೂ ಪ್ರತಿಭಟನೆ ಮಾಡಬಾರದೇ?

(ಗೊಂದಲ)

ಉಪಾಧ್ಯಕ್ಷರು:– ಮಾನ್ಯ ಗೃಹ ಸಚಿವರಿಗೆ ಹೇಳೋಣ.

(ಗೊಂದಲ)

ಶ್ರೀ ಬಿ.ಆರ್. ಪಾಟೀಲ್:– ಅವರನ್ನು immediate ಆಗಿ release ಮಾಡಬೇಕು.

ಶ್ರೀ ಅಶೋಕ್ ಖೇಣಿ:– Economic development ಇಲ್ಲ, ಕುಡಿಯುವುದಕ್ಕೆ Do you want to take away the freedom of speech and freedom of expression. ನೀರಿಲ್ಲ.

(ಗೊಂದಲ)

ಶ್ರೀ ಬಿ.ಆರ್. ಪಾಟೀಲ್:– ದಯಮಾಡಿ ಸರ್ಕಾರ ಉತ್ತರವನ್ನು ಮೊದಲು ಕೊಡಬೇಕು.

ಉಪಾಧ್ಯಕ್ಷರು:– ಉತ್ತರವನ್ನು ನಾಳೆ ಕೊಡುತ್ತಾರೆ.

ಶ್ರೀ ಬಿ.ಆರ್. ಪಾಟೀಲ್:– ಅವರೇನಾದರೂ ಕಾನೂನನ್ನು ಕೈಗೆ ತೆಗೆದುಕೊಂಡಿದ್ದರೆ, ಅಥವಾ ಮತ್ತೇನಾದರೂ ಅನ್ಯಾಯ ಮಾಡಿದ್ದರೆ, ಖಂಡಿತವಾಗಿಯೂ ಅರೆಸ್ಟ್ ಮಾಡುವುದಕ್ಕೆ ಅಧಿಕಾರವಿದೆ.

ಉಪಾಧ್ಯಕ್ಷರು:– ಮಾನ್ಯ ಗೃಹ ಸಚಿವರಿಗೆ ಹೇಳೋಣ ಬಿಡಿ.

(ಗೊಂದಲ)

ಶ್ರೀ ಬಿ.ಆರ್. ಪಾಟೀಲ್:– ಅವರನ್ನು ಏಕೆ ಬಂಧನ ಮಾಡಿದರು? ಯಾವ ಕಾರಣಕ್ಕೆ ಅವರನ್ನು ಅರೆಸ್ಟ್ ಮಾಡಿದರು? ಅವರು ಯಾವ ತಪ್ಪು ಮಾಡಿದರು? ಇದೊಂದು ರೀತಿಯ ಸರ್ವಾಧಿಕಾರ ಧೋರಣೆ, ಪ್ರಜಾಪ್ರಭುತ್ವ ವಿರೋಧಿ ಧೋರಣೆ?

(ಗೊಂದಲ)

ಶ್ರೀ ಹೆಚ್.ಕೆ. ಪಾಟೀಲ್ (ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು):– ಮಾನ್ಯ ಅಧ್ಯಕ್ಷರೆ, ಸರ್ಕಾರ ಸರ್ವಾಧಿಕಾರದ ಧೋರಣೆಯನ್ನು ಮಾಡಿಲ್ಲ. ಪರವಾನಗಿ ತೆಗೆದುಕೊಂಡು ಪ್ರತಿಭಟನೆ ಮಾಡುತ್ತಿದ್ದಾರೆ. Peaceful ಆಗಿ protest ಮಾಡುತ್ತಿದ್ದಾರೆ. ಹಾಗಾಗಿ ಅವರನ್ನು ಅರೆಸ್ಟ್ ಮಾಡುವುದಿಲ್ಲ. ಆದರೆ ತಾವೀಗ ಒಂದು ವಿಷಯವನ್ನು ಪ್ರಸ್ತಾಪಿಸಿದ್ದೀರಿ. ಅದರ ಬಗ್ಗೆ ಮಾಹಿತಿ ತೆಗೆದುಕೊಂಡು ಉತ್ತರ ಕೊಡುತ್ತೇವೆ.

(ಗೊಂದಲ)

ಶ್ರೀ ಬಿ.ಆರ್. ಪಾಟೀಲ್:– ಮಾನ್ಯ ಅಧ್ಯಕ್ಷರೆ, ಇದಕ್ಕೆ ತಕ್ಷಣವೇ ಕಾರಣವೇನೆಂದು ಹೇಳಿ ಉತ್ತರ ಕೊಡಬೇಕು. ಯಾವುದೇ ಇರಬಹುದು, ಕಾರಣವಿಲ್ಲದೇ ಬಂಧನ ಮಾಡುವ ಹಾಗಿಲ್ಲ. ಅವರು ಶಾಂತರೀತಿಯಿಂದ ಪ್ರತಿಭಟನೆ ಮಾಡುತ್ತಿದ್ದಾರೆ. ಬೇಡಿಕೆಯನ್ನು ಇಟ್ಟುಕೊಂಡಿದ್ದಾರೆ. ಹೀಗಿರುವಾಗ ಸರ್ಕಾರ ಅರೆಸ್ಟ್ ಏಕೆ ಮಾಡಿತು? ಇದಕ್ಕೆ ಕಾರಣವೇನು?

ಉಪಾಧ್ಯಕ್ಷರು:– ಪಾಟೀಲರೆ, ಅವರು peaceful ಆಗಿ strike ಮಾಡುತ್ತಿದ್ದಾರೆಂದು ಹೇಳಿದಿರಿ.

ಶ್ರೀ ಬಿ.ಆರ್. ಪಾಟೀಲ್:– ಇಲ್ಲ ಸಾರ್, ಅವರು ದಯಮಾಡಿ ಸದನಕ್ಕೆ ಬರಬೇಕು, ಮೊದಲು ಉತ್ತರ ಕೊಡಬೇಕು. ಇದು ಸಾಮಾನ್ಯವಾದ ಮಾತಲ್ಲ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು:– ಅವರನ್ನು ರಿಲೀಸ್ ಮಾಡಬೇಕು.

(ಗೊಂದಲ)

ಶ್ರೀ ಬಿ.ಆರ್. ಪಾಟೀಲ್:– ರಿಲೀಸ್ ಮಾಡುವ ಪ್ರಶ್ನೆಯಲ್ಲ. ಅವರೇನು ಭಿಕ್ಷೆ ಬೇಡುತ್ತಿರಲಿಲ್ಲ. ಹಕ್ಕಿಗಾಗಿ ಹೋರಾಟ ಮಾಡುತ್ತಿದ್ದಾರೆ. ಅವರನ್ನು ಅರೆಸ್ಟ್ ಏಕೆ ಮಾಡಿದರು? ಇದಕ್ಕೆ ಕಾರಣವೇನು? ಅವರು ಯಾವ ತಪ್ಪು ಮಾಡಿದ್ದಾರೆ? ಸದನದಲ್ಲಿ ಚರ್ಚೆ ನಡೆಯುತ್ತಿದ್ದು, ಅವರು ಅಲ್ಲಿ ಶಾಂತರೀತಿಯಿಂದ ಕುಳಿತು, ಬೇಡಿಕೆಗಳನ್ನಿಟ್ಟುಕೊಂಡು ಪ್ರತಿಭಟನೆ ಮಾಡುತ್ತಿದ್ದಾರೆ. ಸುಮಾರು 38 ಜನರನ್ನು ಅರೆಸ್ಟ್ ಮಾಡಿಕೊಂಡು ಹೋಗಿ ಎಲ್ಲೋ ಒಂದು ಕಡೆ ಇಟ್ಟಿದ್ದಾರೆ. ದಯಮಾಡಿ Home Minister ಸದನಕ್ಕೆ ಬರಬೇಕು. Home Minister ಸದನಕ್ಕೆ ಬಂದು ಇದಕ್ಕೆ ಸ್ಪಷ್ಟೀಕರಣವನ್ನು ಕೊಡಬೇಕು. ಯಾವ ತಪ್ಪು ಮಾಡಿದರೆಂದು ಅವರನ್ನು ಅರೆಸ್ಟ್

ಮಾಡಿದ್ದಾರೆ, ಬೇಡಿಕೆಗಳನ್ನು ಇಟ್ಟುಕೊಂಡು ಪ್ರತಿಭಟನೆ ಮಾಡುವುದು ಅನ್ಯಾಯವೇ? ಅದೊಂದು ಅಪರಾಧವೇ? ಇದೇನು ಗುಲಾಮಗಿರಿಯೇ?

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ್:– ಮೊದಲು ಮಾನ್ಯ ಗೃಹ ಸಚಿವರನ್ನು ಕರೆಸಿ. ಇವರ ಕೆಲಸ ನೋಡಿದರೆ ಮತ್ತು ಇವರ ಆಡಳಿತ ನೋಡಿದರೆ ಬ್ರಿಟಿಷ್ ಆಡಳಿತಕ್ಕಿಂತಲೂ ಕೆಟ್ಟ, ದುರಾಡಳಿತವಾಗುತ್ತದೆ. ಹಾಗಾಗಿ ಮಾನ್ಯ ಸಚಿವರನ್ನು ಕರೆಸಿ.

(ಗೊಂದಲ)

ಶ್ರೀ ಹೆಚ್.ಕೆ. ಪಾಟೀಲ್:– ಮಾನ್ಯ ಅಧ್ಯಕ್ಷರೆ, ಚರ್ಚೆಯನ್ನು ಪ್ರಾರಂಭ ಮಾಡಿ.

ಉಪಾಧ್ಯಕ್ಷರು:– ಪಾಟೀಲರೆ, ಕರೆಸೋಣ. ದಯಮಾಡಿ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಬಿ.ಆರ್. ಪಾಟೀಲ್:– ಕ್ಷಮಿಸಬೇಕು. ಇದು ಬಹಳ ದೊಡ್ಡ ಅಪರಾಧವಾಗುತ್ತದೆ. ದಯಮಾಡಿ ಸರ್ಕಾರ ಬಂದು ಇದಕ್ಕೆ ಉತ್ತರವನ್ನು ಕೊಡಬೇಕು.

ಉಪಾಧ್ಯಕ್ಷರು:– ಪಾಟೀಲರೆ, ತಾವು ಗಂಭೀರವಾಗಿ ಹೇಳಿದ್ದೀರಿ.

ಶ್ರೀ ಬಿ.ಆರ್. ಪಾಟೀಲ್:– ದಯಮಾಡಿ ತಾವು ನಮಗೆ ಅವಕಾಶವನ್ನು ಕೊಡಬೇಕು ಮತ್ತು ಮಂತ್ರಿಗಳನ್ನು ಕರೆಸಬೇಕು. ಯಾವ ಕಾರಣಕ್ಕಾಗಿ ಅರೆಸ್ಟ್ ಮಾಡಿದ್ದಾರೆ, ತಪ್ಪೇನಾಗಿದೆ? ಅನ್ಯಾಯವನ್ನು ಮಾಡಿರುವುದಾದರೂ ಏನು? ಕಾನೂನು ಭಂಗವನ್ನು ಎಲ್ಲಿ ಮಾಡಿದ್ದಾರೆ?

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಬಿ.ಆರ್. ಪಾಟೀಲ್, ಶ್ರೀ ಅಶೋಕ್ ಖೇಣಿ, ಶ್ರೀ ಮಾನಪ್ಪ ವಜ್ಜಲ್ ಮತ್ತು ಶ್ರೀ ಎಸ್. ಶಿವರಾಜ್ ಪಾಟೀಲ್ ರವರು ಸದನದ ಬಾವಿ ಕಡೆಗೆ ಬಂದರು)

ಉಪಾಧ್ಯಕ್ಷರು:– ಪಾಟೀಲರೆ ಹೇಳಿ ಕಳುಹಿಸಿದ್ದೇನೆ. Don't come to well. You should understand.

ಶ್ರೀ ಗೋವಿಂದ ಎಂ. ಕಾರಜೋಳ:– ಮಾನ್ಯ ಅಧ್ಯಕ್ಷರೆ, ವೈಜನಾಥ ಪಾಟೀಲರು ಒಬ್ಬ ಹಿರಿಯ ರಾಜಕಾರಣಿ, ಮಾಜಿ ಸಚಿವರು, ಗೌರವಾನ್ವಿತ ಸದಸ್ಯರಾದವರನ್ನು ಬೇಕಾಬಿಟ್ಟಿ ಅರೆಸ್ಟ್ ಮಾಡಿರುವುದು ಪ್ರಜಾಪ್ರಭುತ್ವದ ವಿರೋಧಿ ನೀತಿಯಾಗುತ್ತದೆ. ಇದು ಬ್ರಿಟಿಷ್ ಆಡಳಿತಕ್ಕಿಂತಲೂ ದುರಾಡಳಿತವಾಗುತ್ತದೆ. ಅದಕ್ಕೆ ಕೂಡಲೇ ಸರ್ಕಾರ ಉತ್ತರ ಕೊಡಬೇಕು. ಸಂಬಂಧಪಟ್ಟಂಥ ಮಂತ್ರಿಗಳು ಇಲ್ಲಿಗೆ ಬರಬೇಕು.

(ಈ ಹಂತದಲ್ಲಿ ವಿರೋಧ ಪಕ್ಷದ ಸದಸ್ಯರುಗಳು ಬಾವಿಗೆ ಬಂದು ಸರ್ಕಾರದ ವಿರುದ್ಧ ಧಿಕ್ಕಾರವನ್ನು ಕೂಗುತ್ತಾ, ಮಾತನಾಡುತ್ತಿದ್ದರು)

(ಗೊಂದಲ)

ಶ್ರೀ ಹೆಚ್.ಕೆ. ಪಾಟೀಲ್:– ಮಾನ್ಯ ಅಧ್ಯಕ್ಷರೆ, ಕಾರಜೋಳ ಅವರೆ, ಈ ಮಾಹಿತಿಯನ್ನು ಮಾನ್ಯ ಬಿ.ಆರ್. ಪಾಟೀಲ್‌ರವರು, ಖೇಣಿಯವರು share ಮಾಡಿದ್ದಾರೆ. ಈಗ ತಕ್ಷಣ ನಾವು Home Minister ರವರಿಗೂ ಸಹ message ನ್ನು ಕಳುಹಿಸಿದ್ದೇವೆ. ಅವರು ಬೇಗ ಬಂದು ವಿವರಣೆಗಳೊಂದಿಗೆ ಉತ್ತರ ಕೊಡುತ್ತಾರೆ. ಅಲ್ಲಿಯವರೆಗೆ ಸದನ ಚಾಲೂ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು.

(ಗೊಂದಲ)

ಉಪಾಧ್ಯಕ್ಷರು:– ಅವರು ಬಂದ ತಕ್ಷಣ ಉತ್ತರ ಕೊಡಿಸುತ್ತೇನೆ. ನೀವು ಗಮನಕ್ಕೆ ತಂದಿದ್ದೀರಿ. ಬೇಗ ಗೃಹ ಸಚಿವರನ್ನು ಕರೆಸಿ.

(ಈ ಹಂತದಲ್ಲಿ ಸದನದ ಬಾವಿಯೊಳಗೆ ನಿಂತಿದ್ದ ಮಾನ್ಯ ಬಿ.ಆರ್. ಪಾಟೀಲ್‌ರವರು ಮತ್ತು ಇತರ ಸದಸ್ಯರು ಉಪಾಧ್ಯಕ್ಷರೊಂದಿಗೆ ಮಾತನಾಡುತ್ತಿದ್ದರು)

ಶ್ರೀ ಬಸವರಾಜ ಬೊಮ್ಮಾಯಿ:– ಮಾನ್ಯ ಸಭಾಧ್ಯಕ್ಷರೆ, freedom park ಇರುವುದು ಪೊಲೀಸರು ನಿಗದಿ ಮಾಡಿರುವ ಸ್ಥಳದಲ್ಲಿ ಅವರು peaceful ಸತ್ಯಾಗ್ರಹವನ್ನು ಮಾಡುತ್ತಿದ್ದಾರೆ. ಅಲ್ಲಿ arrest ಮಾಡುವಂಥ ಪ್ರಶ್ನೆಯೇ ಬರುವುದಿಲ್ಲ. ಅಲ್ಲಿ ಏಕೆ ಮಾಡಿದರು? ವಿಶೇಷವಾಗಿ ಉತ್ತರ ಕರ್ನಾಟಕ Article 371 (j) ಬಗ್ಗೆ ಸಂವಿಧಾನಬದ್ಧವಾಗಿರುವ ಹಕ್ಕನ್ನು ಕೇಳಿದಂಥ ಸಂದರ್ಭದಲ್ಲಿ ಏಕೆ ಅವರನ್ನು arrest ಮಾಡಿದ್ದಾರೆ? ಅವರೇನು ವಿಧಾನಸೌಧದ ಒಳಗಡೆ ಬಂದಿದ್ದರೇ? Prohibited area ಗೆ ಬಂದಿದ್ದರೆ? ಅಲ್ಲಿ peaceful ಆಗಿ ಸತ್ಯಾಗ್ರಹ ಮಾಡುವವರನ್ನು ಏಕೆ ಇವರು arrest ಮಾಡಿದರು? ಈ ಸರ್ಕಾರದ ಧೋರಣೆ ಸರಿ ಅಲ್ಲ. ಇದು ಉತ್ತರ ಕರ್ನಾಟಕದ ಹಿತಾಸಕ್ತಿ ಕಾಪಾಡಲು ಕೇಳುತ್ತಿರುವುದಕ್ಕೆ ಈ ರೀತಿ ಮಾಡಿರುವುದು ಸರಿ ಅಲ್ಲ.

ಶ್ರೀ ಗೋವಿಂದ ಎಂ. ಕಾರಜೋಳ:– ಸನ್ಮಾನ್ಯ ಉಪಾಧ್ಯಕ್ಷರೆ, ಅವರು ಬರದೇ ಇದ್ದರೆ ನಾವೂ ಸಹ well ಗೆ ಹೋಗುತ್ತೇವೆ. ಈ ವಿಚಾರದಲ್ಲಿ ಸರ್ಕಾರದ ನೀತಿ ತಪ್ಪಾಗುತ್ತದೆ.

(ಗೊಂದಲ)

ಉಪಾಧ್ಯಕ್ಷರು:– ಯಾರಾದರೂ ಕೂಡಲೇ ಮಾನ್ಯ ಗೃಹ ಸಚವರಿಗೆ message ಕಳುಹಿಸಿ.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ:– ನಾಳೆ ಯಾರೂ ಸಹ ಶಾಶ್ವತವಾಗಿ ಅಧಿಕಾರದಲ್ಲಿರುವುದಿಲ್ಲ. ಗೃಹ ಸಚಿವರು ಕೂಡಲೇ ಬಂದು ಸದನಕ್ಕೆ ಉತ್ತರ ಹೇಳಬೇಕು. ಸರ್ಕಾರ ಇದನ್ನು ಗಂಭೀರವಾಗಿ ತೆಗೆದುಕೊಳ್ಳಬೇಕು. ವಿಧಾನಸೌಧದ ನೆರಳಲ್ಲೇ ಪ್ರಜಾಪ್ರಭುತ್ವದ ಕೊಲೆಯಾಗುತ್ತಿದೆ. ವ್ಯಕ್ತಿ ಸ್ವಾತಂತ್ರ್ಯ ಹರಣವಾಗುತ್ತಿದೆ. ಇದು ಪೋಲಿಸರ ದೌರ್ಜನ್ಯ

(ಗೊಂದಲ)

ಶ್ರೀ ಹೆಚ್.ಕೆ. ಪಾಟೀಲ್:– ಗೃಹ ಸಚಿವರಿಗೆ ಈಗಾಗಲೇ ಸಂದೇಶವನ್ನು ಕಳುಹಿಸಿದ್ದೇವೆ. ಇಷ್ಟರಲ್ಲೇ ಅವರು ಬರುತ್ತಿದ್ದಾರೆ. ನಮ್ಮ ಸರ್ಕಾರ ಯಾವುದೇ ಕಾರಣಕ್ಕೂ ಅನವಶ್ಯಕವಾಗಿ arrest ಮಾಡಿರುವುದಿಲ್ಲ. ಅಲ್ಲಿ ಏನಾಗಿದೆ ಎನ್ನುವ ಮಾಹಿತಿ ತೆಗೆದುಕೊಂಡು ನಿಮ್ಮಲ್ಲಿ ಹಂಚಿಕೆ ಮಾಡಿಕೊಳ್ಳುತ್ತೇವೆ. ಯಾವುದೇ ಕಾರಣಕ್ಕೂ ಸದನವನ್ನು ಈ ರೀತಿ ನಿಲುಗಡೆ ಮಾಡತಕ್ಕದ್ದು ಒಳ್ಳೆಯದಲ್ಲ. ಚರ್ಚೆ ಪ್ರಾರಂಭವಾಗಲಿ.

(ಗೊಂದಲ)

ಶ್ರೀ ಕೆ.ಎಂ. ಶಿವಲಿಂಗೇಗೌಡ:– ಸದನ ನಡೆಯಬೇಕೆಂದರೆ ಸರ್ಕಾರದಿಂದ ಬೇಗ ಉತ್ತರ ಕೊಡಿಸಿ. ಏಕೆ arrest ಮಾಡಿದರು? ಏನು, ಕಾರಣವೇನು ಎನ್ನುವುದರ ಬಗ್ಗೆ ಉತ್ತರ ಕೊಡಿಸಿ.

(ಗೊಂದಲ)

ಉಪಾಧ್ಯಕ್ಷರು:– ಈಗ ಸದನವನ್ನು 10 ನಿಮಿಷಗಳವರೆಗೆ ಮುಂದೂಡಲಾಗಿದೆ. ನಂತರ ಚರ್ಚೆ ನಡೆಯುತ್ತದೆ.

(ಸದನವು 3 ಗಂಟೆ 17 ನಿಮಿಷದಿಂದ 10 ನಿಮಿಷಗಳವರೆಗೆ ಮುಂದೂಡಲ್ಪಟ್ಟಿತು)

(ಸದನವು ಮಧ್ಯಾಹ್ನ 03 ಗಂಟೆ 34 ನಿಮಿಷಕ್ಕೆ ಪುನರ್ ಸಮಾವೇಶಗೊಂಡಿತು. ಮಾನ್ಯ ಉಪಾಧ್ಯಕ್ಷರು ಪೀಠದಲ್ಲಿ ಉಪಸ್ಥಿತರಿದ್ದರು.)

(ಈ ಹಂತದಲ್ಲಿ ಭಾರತೀಯ ಜನತಾ ಪಕ್ಷದ ಮಾನ್ಯ ಸದಸ್ಯರುಗಳು ಸದನದ ಬಾವಿಯಲ್ಲಿದ್ದರು.)

ಉಪಾಧ್ಯಕ್ಷರು:– ಮಾನ್ಯ ಗೃಹ ಮಂತ್ರಿಗಳು ಹೇಳಿ.

ಶ್ರೀ ಜಗದೀಶ ಶೆಟ್ಟರ್:– ಮಾನ್ಯ ಅಧ್ಯಕ್ಷರೆ, ಹಿರಿಯರಾದ ವೈಜನಾಥ ಪಾಟೀಲ್‌ರವರನ್ನು ಏಕೆ arrest ಮಾಡಿದರೆಂದು ಗೊತ್ತಾಗಿಲ್ಲ.

ಶ್ರೀ ಕೆ.ಜೆ. ಜಾರ್ಜ್ (ಗೃಹಮಂತ್ರಿಗಳು):– ಮಾನ್ಯ ಅಧ್ಯಕ್ಷರೆ, ವೈಜನಾಥ ಪಾಟೀಲ್‌ರವರನ್ನು arrest ಮಾಡಿದ್ದಾರೆಂದು ಈಗಾಗಲೇ ವಿರೋಧ ಪಕ್ಷದ ಸನ್ಮಾನ್ಯ ಸದಸ್ಯರು ಹೇಳಿದ್ದಾರೆ. ವೈಜನಾಥ ಪಾಟೀಲ್‌ರವರು Freedom Park ನಲ್ಲಿ ಹೈದರಾಬಾದ್–ಕರ್ನಾಟಕ 371 (J) ವಿಚಾರದಲ್ಲಿ strike ಕುಳಿತಿದ್ದರು. ಅವರು ರಾಜ್ಯಪಾಲರನ್ನು ಭೇಟಿಯಾಗಬೇಕೆಂದು request ಮಾಡಿದ್ದಾರೆ. ನಮ್ಮ ಪೊಲೀಸ್ ಅಧಿಕಾರಿಗಳು ರಾಜ್ಯಪಾಲರನ್ನು ಭೇಟಿಯಾಗಬೇಕೆಂದು request ಮಾಡಿದ್ದಾರೆ. ನಮ್ಮ ಪೊಲೀಸ್ ಅಧಿಕಾರಿಗಳು ರಾಜ್ಯಪಾಲರ ಕಛೇರಿಯಲ್ಲಿ contact ಮಾಡಿದಾಗ ರಾಜ್ಯಪಾಲರು ಈಗ ನಾನು ಯಾರನ್ನೂ ಭೇಟಿ ಮಾಡಲಾಗುವುದಿಲ್ಲವೆಂದು ಹೇಳಿದ್ದಾರೆ. ಆ message ಅನ್ನು ನಮ್ಮ ಪೊಲೀಸ್ ಅಧಿಕಾರಿಗಳು ಇವರಿಗೆ ತಿಳಿಸಿದ್ದಾರೆ. ಆದರೂ ಅವರು ಇಲ್ಲ, ನಾವು ರಾಜ್ಯಪಾಲರನ್ನು ಭೇಟಿ ಮಾಡಲೇಬೇಕು ಎಂದು ಹಠ ಹಿಡಿದದ್ದಕ್ಕೆ preventive arrest ಮಾಡಿ ವೈಜನಾಥ ಪಾಟೀಲ್ ಮತ್ತು ಕೆಲವರನ್ನು arrest ಮಾಡಿದ್ದಾರೆ. ಅವರನ್ನು ಬಿಡುಗಡೆ ಮಾಡಲು ಈಗಾಗಲೇ ಕ್ರಮ ತೆಗೆದುಕೊಳ್ಳಲಾಗಿದೆ.

ಶ್ರೀ ಜಗದೀಶ ಶೆಟ್ಟರ್:– ಮಾನ್ಯ ಅಧ್ಯಕ್ಷರೆ, ಒಂದು ವಿಚಾರ ನಾನು ಹೇಳುವುದು. ಅಲ್ಲಿ ರಾಜ್ಯಪಾಲರನ್ನು ಭೇಟಿಯಾಗಬೇಕೆಂದು ವೈಜನಾಥ ಪಾಟೀಲರು ಪೊಲೀಸರಿಗೆ ಹೇಳಿದರು. ಪೊಲೀಸರು ರಾಜ್ಯಪಾಲರ ಕಛೇರಿಯಲ್ಲಿ ಕೇಳಿದರು. ರಾಜ್ಯಪಾಲರು ಈಗ ನಾನು ಯಾರನ್ನೂ ಭೇಟಿಯಾಗುವುದಿಲ್ಲವೆಂದು ಹೇಳಿದರು. ಆದರೂ ರಾಜ್ಯಪಾಲರನ್ನು ಭೇಟಿಯಾಗಲು ಹೋಗುವುದಾಗಿ ವೈಜನಾಥ ಪಾಟೀಲ್‌ರವರು ಹೇಳಿದರು. ಯಾವಾಗಲೂ ನೋಡಿ ರಾಜಭವನದ ಕಡೆ ಹೋಗಿ gate ಬಳಿ ನಿಂತು ಒಳ ಹೋಗಲು ಪ್ರಯತ್ನ ಮಾಡಿದ್ದರೆ ಅದು ಬೇರೆ. ಆದರೆ, ಇವರು ಇನ್ನೂ ಇಲ್ಲಿಯೇ Freedom Park ನಲ್ಲಿದ್ದಾರೆ. ಅವರು ಹೋಗುತ್ತಿದ್ದರೋ, ಇಲ್ಲವೋ ಗೊತ್ತಿಲ್ಲ. ಇವರು presumption ಮಾಡಿಕೊಂಡು ತಕ್ಷಣ arrest ಮಾಡುವುದು ಸರಿಯೇನು?

ಶ್ರೀ ಕೆ.ಜೆ. ಜಾರ್ಜ್:– ಮಾನ್ಯ ಅಧ್ಯಕ್ಷರೆ, ವಿರೋಧ ಪಕ್ಷದ ನಾಯಕರಿಗೆ ಗೊತ್ತಿದೆ.

ಶ್ರೀ ಜಗದೀಶ್ ಶೆಟ್ಟರ್:– ಮಾನ್ಯ ಅಧ್ಯಕ್ಷರೆ, ನಾನು ಒಂದು ಮಾತನ್ನು ಹೇಳುತ್ತೇನೆ. ಸರ್ಕಾರದ ಈ ಕ್ರಮ ಸರಿಯಾದುದಲ್ಲ. ಪೊಲೀಸರು, ಇದನ್ನು ಅರ್ಥ ಮಾಡಿಕೊಳ್ಳಬೇಕು. Freedom Park ನಲ್ಲಿ 40–50 ಜನರು ಹೋರಾಟ ಮಾಡುತ್ತಿದ್ದರು. ವೈಜನಾಥ ಪಾಟೀಲ್ ರವರು ನಿನ್ನೆ ನನ್ನನ್ನೂ ಭೇಟಿಯಾಗಿದ್ದರು. ಇಲ್ಲ, ಇಂದು ಧರಣಿ ಕೂರುತ್ತಿದ್ದೇವೆ, ನೀವು ಸ್ವಲ್ಪ ಮಧ್ಯಾಹ್ನದ ಮೇಲೆ ಬನ್ನಿ ಎಂದು ಹೇಳಿದ್ದರು. ಅದಕ್ಕೆ ನಾನು ಮಧ್ಯಾಹ್ನ ಹೊರಟಿದ್ದೆ. Article 371 (J) ಸಲುವಾಗಿ ಹೋರಾಟ ಮಾಡುತ್ತಿದ್ದಾರೆ. ಮೊನ್ನೆ ನಾನು submit ಮಾಡಿದೆ. 371 (J) ನಲ್ಲಿ ಸ್ವಲ್ಪ ತಿದ್ದುಪಡಿ ಆಗಬೇಕಾಗಿದೆ. ಅದಕ್ಕಾಗಿ ಅದರ ಬಗ್ಗೆ ಹೋರಾಟ ಮಾಡುತ್ತಿದ್ದೇವೆ ಎಂಬ ಮಾತನ್ನು ಹೇಳಿದರು ಮತ್ತು ಇಂದು ಸಾಯಂಕಾಲ ನನಗೂ ಭೇಟಿಯಾಗುವುದಾಗಿ ಹೇಳಿದ್ದರು. ಆದರೆ, Freedom Park ನಿಂದ ಹೊರಗೆ ಬಂದು ಕಾರಿನಲ್ಲಿ ಕುಳಿತಿದ್ದಾರೆ, ಅಲ್ಲಿ arrest ಮಾಡುವಂತಹುದು ಮತ್ತು ಕೊನೆಗೆ ರಾಜ್ಯಪಾಲರು ಅವರನ್ನು ಭೇಟಿಯಾಗಿಲ್ಲವೆಂದರೆ atleast ಅವರ ಕಛೇರಿಗೆ ಹೋಗಿ ADC ಯಾರು ಇರುತ್ತಾರೆ, Secretary ಯವರನ್ನು ಭೇಟಿಯಾಗುತ್ತಿದ್ದರು. ಇದೇನು ರಾಜಭವನಕ್ಕೆ ಹೋಗುವುದು ಅಪರಾಧವೆ? ರಾಜ್ಯಪಾಲರು appointment ಕೊಟ್ಟಿಲ್ಲವೆಂದರೆ, ಅವರನ್ನು ಭೇಟಿಯಾಗುತ್ತಿರಲಿಲ್ಲ. ಆದರೆ, ನೇರವಾಗಿ ADC ಅಥವಾ Secretary ಯವರನ್ನು ಶಾಂತರೀತಿಯಿಂದ ಭೇಟಿಯಾಗಿ ಒಂದು memorandum ಆದರೂ ಕೊಟ್ಟು ಬರುತ್ತಿದ್ದರು. ಇವರು ನೂರಾರು ಜನ, ಹತ್ತು ಸಾವಿರ ಜನರು ಹೋಗಿ ರಾಜಭವನಕ್ಕೆ ನುಗ್ಗಲು ಹೋಗಿರಲಿಲ್ಲ.

ಉಪಾಧ್ಯಕ್ಷರು:– ಅದಲ್ಲ, ಈಗ ಬಿಡುಗಡೆ ಮಾಡುವುದಕ್ಕೆ ಕ್ರಮ ತೆಗೆದುಕೊಂಡಿರುವುದಾಗಿ ಮಂತ್ರಿಗಳು ಹೇಳಿದ್ದಾರೆ.

ಶ್ರೀ ಕೆ.ಜೆ. ಜಾರ್ಜ್:– ಮಾನ್ಯ ಅಧ್ಯಕ್ಷರೆ, ವಿರೋಧ ಪಕ್ಷದ ನಾಯಕರು ಮುಖ್ಯಮಂತ್ರಿಗಳಾಗಿ ಇಲ್ಲಿ ಕೆಲಸ ಮಾಡಿದ್ದಾರೆ. ಇಲ್ಲಿ ಕಾನೂನು ಇದೆ. ರಾಜ್ಯಪಾಲರಿಗೆ ನಾವು ಒತ್ತಡ ಮಾಡಲಾಗುವುದಿಲ್ಲ. ರಾಜ್ಯಪಾಲರೇನಾದರೂ

ನನ್ನ ADC ಯನ್ನು meet ಮಾಡಲಿ, ನನ್ನ Secretary ಯನ್ನು meet ಮಾಡಲಿ ಎಂದು ನಮ್ಮ ಅಧಿಕಾರಿಗಳಿಗೆ ಹೇಳಿದ್ದರೆ ಅವರನ್ನು ಕರೆದುಕೊಂಡು ಹೋಗಿ ಬಿಡಬಹುದಾಗಿತ್ತು. ಈಗೇನಾಗಿದೆ ಎಂದರೆ, preventive arrest ಮಾಡಿದ್ದೇವೆ.

ಉಪಾಧ್ಯಕ್ಷರು:– ಈಗ ಬೇಗ ಬಿಡುಗಡೆ ಮಾಡುವಂತಹ ಕೆಲಸವನ್ನು ಮಾಡಿ.

ಶ್ರೀ ಕೆ.ಜೆ. ಜಾರ್ಜ್:– ಏಕೆಂದರೆ ಯಾರೂ ರಾಜ್ಯಪಾಲರ ಬಳಿ ಹೋಗಿ ತೊಂದರೆಯಾಗಬಾರದು ಎಂದು preventive arrest ಮಾಡಿದ್ದೇವೆ. ಅವರಿಗೆ ಯಾವುದೇ ರೀತಿಯ ತೊಂದರೆ ಕೊಡುವುದಿಲ್ಲ. ನಮ್ಮ ಪೊಲೀಸರು ಚೆನ್ನಾಗಿ ನೋಡಿಕೊಳ್ಳುತ್ತಾರೆ. ಅದಾದ ಮೇಲೆ ಅವರನ್ನು ಬಿಡುತ್ತಾರೆ. ಏನೂ ತೊಂದರೆಯಿಲ್ಲ. Arrest ಮಾಡಿದ ತಕ್ಷಣ ಅವರ ಮೇಲೆ ಯಾವುದೇ case ಹಾಕುವುದಿಲ್ಲ. ಕಾನೂನು ಪ್ರಕಾರ ನಾವು ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ನಾವು ಜಗದೀಶ ಶೆಟ್ಟರ್‌ರವರು ಹೇಳಿದಂತೆ ಅವರನ್ನು ಏನೂ ಮಾಡುತ್ತಿರಲಿಲ್ಲ.

ಶ್ರೀ ಜಗದೀಶ್ ಶೆಟ್ಟರ್:– ಮಾನ್ಯ ಅಧ್ಯಕ್ಷರೆ, ಇದನ್ನೆಲ್ಲಾ presumption ಮಾಡಿಕೊಂಡು. ಅವರು 80 ವರ್ಷ ವಯಸ್ಸಿನವರು.

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್:– ನಿಮ್ಮ ಕಾಲದಲ್ಲಿ ಏನೂ ಆಗಲಿಲ್ಲವೇನು? ನಮ್ಮನ್ನೇ ಕರೆದುಕೊಂಡು ಹೋಗಿದ್ದರು ವಿಧಾನಸೌಧಕ್ಕೆ ಬಿಡಲಿಲ್ಲ. . .

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್:– ನನ್ನನ್ನೂ ಸಹಿತ ಕರೆದುಕೊಂಡು ಹೋಗಿ preventive arrest ಮಾಡಿದ್ದರು. ಇವರೇನು ಮಾತನಾಡುತ್ತಿದ್ದಾರೆ? ಇವರು ಎಲ್ಲರನ್ನೂ ಹಾಕಿರಲಿಲ್ಲವೇನು? ನಮ್ಮನ್ನು ವಿಧಾನಸೌಧದ ಒಳಗಡೆ ಬಿಡಲಿಲ್ಲ ಇವರು. ಇವರು ಮಾತನಾಡುತ್ತಾರೆ.

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್:– ಮಾಡಬಾರದ್ದೆಲ್ಲವನ್ನೂ ನೀವು ಮಾಡಿ ಈಗ ನಮಗೆ ಮಾತನಾಡುತ್ತೀರಾ? ನಾವು ಹೇಳುತ್ತಿದ್ದೇವೆ. Preventive arrest ಮಾಡಿದ್ದೇವೆ. ನೋಡಿಕೊಳ್ಳುತ್ತೇವೆ, ಬಿಡುತ್ತೇವೆ ಎಂದು ಹೇಳಿದ ಮೇಲೆ ನೀವು ಅದನ್ನೇ ಹಿಡಿದುಕೊಂಡು ಸದನದಲ್ಲಿ ಗಲಾಟೆ ಮಾಡಿದರೆ ಏನು ಮಾಡಲಾಗುತ್ತದೆ?

ಉಪಾಧ್ಯಕ್ಷರು:– ಈಗ ಅವರು ಹೇಳಿದ್ದಾರೆ. ಬೇಗ ಬಿಡುಗಡೆ ಮಾಡಿಸುವ ವ್ಯವಸ್ಥೆ ಮಾಡಿ.

(ಗೊಂದಲ)

ಉಪಾಧ್ಯಕ್ಷರು:– ಆಯಿತು. ಈಗ ಮಂತ್ರಿಗಳು ಬಿಡುಗಡೆ ಮಾಡಿಸುವ ವ್ಯವಸ್ಥೆ ಮಾಡುತ್ತೇವೆಂದು ಹೇಳಿದ್ದಾರೆ.

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್:– ನಮ್ಮನ್ನು ವಿಧಾನಸೌಧದ ಒಳಗಡೆ ಬಿಡಲಿಲ್ಲ ನೀವು. ಈಗ ಮಾತನಾಡುತ್ತೀರಾ? ಈಗ ನಮ್ಮನ್ನು arrest ಮಾಡಿ ಬಿಡಲಿಲ್ಲವೇನು? ಅಲ್ಲಿ ನಾಯಿಗಳ ಒಟ್ಟಿಗೆ ನಮ್ಮನ್ನು ಹಾಕಿದ್ದೀರಿ.

(ಗೊಂದಲ)

ಉಪಾಧ್ಯಕ್ಷರು:– ಆಯಿತು. ಈಗ ಅವರನ್ನು ಬಿಡುಗಡೆ ಮಾಡುವುದಕ್ಕೆ ಗೃಹ ಮಂತ್ರಿಗಳು ಹೇಳಿದ್ದಾರೆ.

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್:– ನೋಡಿ ಅದು ರಾಜ್ಯಪಾಲರಿಗೆ ಬಿಟ್ಟಿದ್ದು. ಅವರು ಅನುಮತಿ ಕೊಟ್ಟರೆ ಈಗಲೂ ಕರೆದುಕೊಂಡು ಹೋಗಿ ಬಿಡುತ್ತೇವೆ. ಏನೂ ತೊಂದರೆಯಿಲ್ಲ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– ಇಲ್ಲಿ ಸರ್ಕಾರವೂ ಸರಿಯಾಗಿ response ಕೊಡುತ್ತಿಲ್ಲ. ಈ ಕಡೆ ರಾಜ್ಯಪಾಲರನ್ನು ಹೋಗಿ ಭೇಟಿಯಾಗಲೂ ಬಿಡುತ್ತಿಲ್ಲ.

ಶ್ರೀ ಕೆ.ಜೆ. ಜಾರ್ಜ್:– ಈ ರೀತಿ ಮಾಡಿದರೆ ಆಡಳಿತ ನಡೆಸಲಾಗುವುದಿಲ್ಲ.

ಉಪಾಧ್ಯಕ್ಷರು:– ಈಗ ಮಂತ್ರಿಗಳು ಅವರನ್ನು ಬಿಡುಗಡೆ ಮಾಡಿಸುವುದಾಗಿ ಹೇಳುತ್ತಿದ್ದಾರಲ್ಲ, ದಯವಿಟ್ಟು ಎಲ್ಲರೂ ನಿಮ್ಮ ಸ್ಥಾನಗಳಿಗೆ ತೆರಳಿ.

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್:– ನಿಮಗೆ ಅಧಿವೇಶನ ನಡೆಸುವ ಇಚ್ಛೆ ಇಲ್ಲ. ನಿಮಗೆ ಚರ್ಚೆ ಬೇಕಾಗಿಲ್ಲ. ನಿಮಗೆ ಹೈದರಾಬಾದ್–ಕರ್ನಾಟ ವಿಚಾರ ಬೇಕಿಲ್ಲ, ಯಾವುದೇ ವಿಚಾರಗಳೂ ಬೇಕಿಲ್ಲ. . .

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್:– ಏನು ಬೇಕಾದರೂ ಮಾಡುತ್ತಿದ್ದೀರಿ ಹೊರತು ಇದನ್ನು ಕುಂಠಿತಗೊಳಿಸುತ್ತೀರಿ, ಬೇರೆ ಯಾವುದೂ ಇದರಲ್ಲಿ ಇಲ್ಲ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– ಮಾನ್ಯ ಅಧ್ಯಕ್ಷರೆ, ಅವರು, immediately release ಮಾಡಲೆಂದು ಹೇಳಲಿ, immediately release ಮಾಡಿ ಎಂದು ಹೇಳಿ.

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್:– ನೀವು ನಮ್ಮನ್ನು ಬಸ್‌ಗೆ ಹಾಕಿದ್ದೀರಿ, ನಿಯಮಾವಳಿ ಪ್ರಕಾರ ನೀವು ಮಾಡಿದಿರಾ?

ಉಪಾಧ್ಯಕ್ಷರು:– ಬಿಡುಗಡೆ ಮಾಡಿಸುತ್ತೇವೆಂದು ಹೇಳಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– ಮಾನ್ಯ ಅಧ್ಯಕ್ಷರೆ, ಇವತ್ತು ರಾಜ್ಯಪಾಲರನ್ನು ಭೇಟಿ ಮಾಡುವುದಕ್ಕೇ ಹೋಗಿಲ್ಲ, ಇದು ತೊಘಲಕ್ ದರ್ಬಾರ್, memorandum ಕೊಟ್ಟು ಬರುತ್ತೇವೆಂದು ಹೇಳಿದರೂ ಇವರು ಬಿಡುವುದಿಲ್ಲವೆಂದರೆ ಸರ್ಕಾರ ಹೇಗೆ ನಡೆಯುತ್ತಿದೆ? ಶಾಂತ ರೀತಿಯಿಂದ ಸ್ಟ್ರೈಕ್, ಹೋರಾಟ ಮಾಡುವುದಕ್ಕೆ ಅವಕಾಶವಿಲ್ಲವೆಂದರೆ, ಇವತ್ತು ಇಲಾಖೆಯಲ್ಲಿ ಏನು ನಡೆಯುತ್ತಿದೆ? ಪೊಲೀಸರಿಂದ ಯಾವ ರೀತಿ ಸರ್ಕಾರ ನಡೆಸುತ್ತಿದ್ದಾರೆಂದು ತಿಳಿಯುತ್ತದೆ. ಇವತ್ತು ಶಾಂತ ರೀತಿಯಿಂದ ಹೋರಾಟ ಮಾಡುವ ಹಿರಿಯ ವ್ಯಕ್ತಿಯನ್ನು, ಅದರಲ್ಲೂ Article 371(J) ಹೈದರಾಬಾದ್–ಕರ್ನಾಟಕಕ್ಕೆ ವಿಶೇಷ ಸ್ಥಾನಮಾನ ಕೊಡುವುದಕ್ಕೆ ಸಂಬಂಧಿಸಿದಂತೆ ಹೋರಾಟ ಮಾಡುವ ಹಿರಿಯ ವ್ಯಕ್ತಿ ವೈದ್ಯನಾಥ ಪಾಟೀಲ್ ಅವರನ್ನು ಅರೆಸ್ಟ್ ಮಾಡುತ್ತಾರೆಂದರೆ, ಹೇಗೆ?

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್:– ಇವರಿಗೆ ಚರ್ಚೆ ಮಾಡುವುದು ಬೇಕಾಗಿಲ್ಲ, ಯಾವುದೇ ಸಬ್ಜೆಕ್ಟ್ ಡಿಸ್ಕಸ್ ಮಾಡಬೇಕಾಗಿಲ್ಲ, ಏನೂ ಇಲ್ಲದಿರುವುದನ್ನು ತೆಗೆದುಕೊಂಡು ಡಿಸ್ಕಸ್ ಮಾಡುತ್ತಿದ್ದಾರೆಯೇ ಹೊರತು ಏನೂ ಇಲ್ಲ. ಹೋರಾಟ ಮಾಡುವ ವ್ಯಕ್ತಿಗಳು ಕಾನೂನು ಬಾಹಿರವಾಗಿ ಮಾಡುತ್ತಿದ್ದರೆ ಸುಮ್ಮನಿರುವುದಕ್ಕಾಗುತ್ತದೆಯೇ? ಕಾನೂನು ರೀತಿಯಲ್ಲಿ ಹೋರಾಟ ಮಾಡಬೇಕು, ಕಾನೂನು ಬಿಟ್ಟು ಯಾರೂ ಹೋರಾಟ ಮಾಡುವುದಕ್ಕಾಗುವುದಿಲ್ಲ.

(ಗೊಂದಲ)

ಶ್ರೀ ಪ್ರಿಯಾಂಕ ಖರ್ಗೆ:– 371(ಜೆ) ನಿಮ್ಮ ಬದ್ಧತೆ ಎಷ್ಟಿದೆ ಎಂದು ಎಲ್ಲರಿಗೂ ಗೊತ್ತಿದೆ, ಎಷ್ಟು ಮಾಡಿದ್ದೀರೆಂದು ಗೊತ್ತಿದೆ, ನೀವು ಅಧಿಕಾರದಲ್ಲಿದ್ದಾಗ ಇದು ಆಗುವುದಿಲ್ಲವೆಂದು ಬರೆದುಕೊಟ್ಟಿರುವುದಕ್ಕೆ ಇಲ್ಲಿ ಸಾಕ್ಷಿ ಇದೆ, 371 (ಜೆ) ಬಗ್ಗೆ ಎಷ್ಟು ಬದ್ಧತೆ ಇದೆ ಗೊತ್ತಿದೆ, ಇದು ಮೊಸಳೆ ಕಣ್ಣೀರು, ಇದನ್ನು ರಾಜಕೀಯ ಪ್ರಚಾರಕ್ಕೋಸ್ಕರ್ ಮಾಡುತ್ತಿರುವುದು.

(ಗೊಂದಲ)

ಉಪಾಧ್ಯಕ್ಷರು:– ಮಾನ್ಯ ಸದಸ್ಯರು ತಮ್ಮ ಸ್ಥಾನಗಳಿಗೆ ತೆರಳಿ, ಡಿಸ್ಕಷನ್ ಆಗಲಿ.

ಶ್ರೀ ಗೋವಿಂದ ಎಂ. ಕಾರಜೋಳ:– ಮಾನ್ಯ ಅಧ್ಯಕ್ಷರೆ, ರಿಲೀಸ್ ಮಾಡುತ್ತೇವೆಂದು ಹೇಳಲಿಲ್ಲ, ಏನು ತಪ್ಪಿದೆ?

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– ಇವರು ಇಲ್ಲಿ ಮಂತ್ರಿಗಳ ಹತ್ತಿರ ಹೋದಾಗ, ಮೆಮೆರಾಂಡಂ ತೆಗೆದುಕೊಳ್ಳಬೇಕಾಗಿತ್ತು, ಅವರು ತೆಗೆದುಕೊಳ್ಳಲಿಲ್ಲ. ಏನು ಇವತ್ತು Article 371(J) ಮಂಡನೆ ಮಾಡಿದ್ದಾರೆ ಅದಕ್ಕೆ ಮುಖ್ಯಸ್ಥರು Governor. ರಾಜ್ಯಪಾಲರನ್ನು ಭೇಟಿ ಮಾಡಲು ಅವಕಾಶ ಕೊಡುವುದಿಲ್ಲವೆಂದರೆ ಇದು ಎಂಥ ಸರ್ಕಾರ? ಇದು ತೊಘಲಕ್ ದರ್ಬಾರು, ಇವರು ತೊಘಲಕ್ ದರ್ಬಾರು ಮಾಡುತ್ತಿದಾರೆ, ಹೋಂ ಡಿಪಾರ್ಟ್ಮೆಂಟ್ ತೊಘಲಕ್ ದರ್ಬಾರು ಮಾಡುತ್ತಿದೆ.

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್:– ನೀವು ಹಾವೇರಿಯಲ್ಲಿ ಗೋಲಿಬಾರ್ ಮಾಡಿ ರೈತರನ್ನು ಸಾಯಿಸಿದರಿ ಅದಕ್ಕೇನು ಘನತೆ ಇದೆಯಾ? ನೀವು ರೈತರ ಪರವಾಗಿದ್ದೀರಾ? ಹಾವೇರಿ ಫೈರಿಂಗ್ ಎಲ್ಲಾ ಮರೆತುಬಿಟ್ಟಿದ್ದೀರಾ? ನೀವು ಮಾಡಬಾರದೆಲ್ಲಾ ಮಾಡಿದ್ದೀರಿ, ನಮ್ಮನ್ನೂ ಸಹ ವಿಧಾನಸೌಧಕ್ಕೆ ಬಂದಾಗ ಅರೆಸ್ಟ್ ಮಾಡಿದ್ದೀರಿ.

ಉಪಾಧ್ಯಕ್ಷರು:– ಈಗ ಮಂತ್ರಿಗಳು ಬಿಡುಗಡೆ ಮಾಡಿಸುತ್ತೇವೆಂದು ಹೇಳಿದ್ದಾರಲ್ಲಾ? ತಮ್ಮ ಸ್ಥಾನಕ್ಕೆ ತೆರಳಿ, ಈಗ ಡಿಸ್ಕಷನ್ ಮಾಡುವ ಬಹಳಷ್ಟು ವಿಷಯಗಳಿವೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– ಅವರು ಬಹಳ ದೊಡ್ಡ ಅಫೆಂಡರ್ ಆಗಿದ್ದಾರೆಯೇ?

ಶ್ರೀ ಕೆ.ಜೆ. ಜಾರ್ಜ್:– ಮಾನ್ಯ ಅಧ್ಯಕ್ಷರೆ, ಅವರನ್ನು preventive custody ಗೆ ತೆಗೆದುಕೊಂಡಿದ್ದೇವೆ, ಅವರ ಮೇಲೆ ಯಾವ ಕೇಸೂ ದಾಖಲಾಗುವುದಿಲ್ಲ. ನಮಗಿದ್ದ ಒಂದೇ ಒಂದು ಉದ್ದೇಶವೆಂದರೆ, ರಾಜ್ಯಪಾಲರ ಅನುಮತಿ ಇಲ್ಲದೆ ರಾಜಭವನಕ್ಕೆ ಹೋಗುವುದಕ್ಕಾಗುವುದಿಲ್ಲ. ಆ ಉದ್ದೇಶದಿಂದ preventive arrest ಮಾಡಿದ್ದೇವೆ. ಈಗ ಅವರನ್ನು ಬಿಡುಗಡೆ ಮಾಡುವಂಥ ಆದೇಶವನ್ನು ಕೊಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್:– ಮುಂದೆ, ಈ ರೀತಿಯಾದ ಘಟನೆಗಳಾಗಬಾರದಷ್ಟೆ, ಇವರು ಬುದ್ಧಿ ಕಲಿತುಕೊಳ್ಳಲಿ.

ಡಾ॥ ಶರಣಪ್ರಕಾಶ್ ಆರ್. ಪಾಟೀಲ್ (ವೈದ್ಯಕೀಯ ಶಿಕ್ಷಣ ಸಚಿವರು):– ಮಾನ್ಯ ಅಧ್ಯಕ್ಷರೆ, ಇವರು ಅಧಿಕಾರದಲ್ಲಿದ್ದಾಗ ಏನೇನು ಮಾಡದ್ದೀರೆಂದು ನಾವು ಹೇಳುವುದಕ್ಕೆ 15 ದಿವಸ ಬೇಕಾಗುತ್ತದೆ..

(ಗೊಂದಲ)

ಶ್ರೀ ಪ್ರಿಯಾಂಕ ಖರ್ಗೆ:– ಪೊಲೀಸರನ್ನು ವಿಧಾನಸಭೆಗೆ ಕರೆಯಿಸಿದ್ದರಲ್ಲಾ ಅದೇ ಒಂದು ಇತಿಹಾಸ, ಅದೇ ನಿಮ್ಮ ಕೊಡುಗೆ ಯಾವ ಶಾಸಕರಿಗೂ ಸದನಕ್ಕೆ ಎಂಟ್ರಿ ಕೊಟ್ಟಿಲ್ಲ.

ಡಾ॥ ಶರಣಪ್ರಕಾಶ್ ಆರ್. ಪಾಟೀಲ್:– ನೀವು ಅಧಿಕಾರದಲ್ಲಿದ್ದಾಗ ಏನೇನು ಮಾಡಿದ್ದೀರೆಂದು ಹೇಳುವುದಕ್ಕೆ ಒಂದು ತಿಂಗಳ ವಿಶೇಷ ಅಧಿವೇಶನವನ್ನೆ ಕರೆಯಬೇಕಾಗುತ್ತದೆ.

ಉಪಾಧ್ಯಕ್ಷರು:– ಬಸವರಾಜ ಬೊಮ್ಮಾಯಿಯವರೆ, ಬೆಳಿಗ್ಗೆ 50 ನಿಮಿಷ ಮಾತನಾಡಿದ್ದೀರಿ ಬೇಡಿಕೆ ಮೇಲೆ ಚರ್ಚೆ ಮುಂದುವರೆಸಿ, ಅರ್ಧ ಗಂಟೆಯಲ್ಲಿ ಮುಗಿಸುವುದು.